KACM010000222022

Presented on : 04-01-2022
Registered on : 04-01-2022

**IN THE COURT OF**
**PRL. DISTRICT AND SESSIONS JUDGE.CHIKMAGALUR AT Chikmagalur,CHIKMAGALUR**
**Presided Over by SHUBHA GOWDAR**
**Edu.Appl/1/2022**

Petitioner:
Sri. Hemodhara.S/o Annu Poojary, Aged about 38 years, Physical Education Teacher, St.Mary's School, Chikkamagaluru. R/o Sharath Complex, Government Hospital Quarters, Opp. Kodaganur Road, Aldur at and Post, Chikkamagaluru Taluk.

VERSUS

Respondent:
1. The State of Karnataka, Rept. By its Secretary, Primary and Secondary Education, Bengaluru.
**2:The Deputy Director, Public Instructions, Chikkamagaluru District. Chikkamagaluru.**
**3:The Block Education Officer, Chikkamagaluru Taluk Belur Road, Chikkamagaluru.**
**4:The Secretary , Holy Spirit Education Society ( regd), Chikkamagaluru, ( St. Marys School Kote ,CKM**

---

Advocate for Petitioner: B.M. LAXMANA GOWDA
Advocate for Respondent No.4:**V.T. THOMAS**

---

ದಿನಾಂಕಃ 31-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರಃ ಶ್ರೀ ಬಿ.ಎಂ.ಎಲ್.ಜಿ. ವಕೀಲರಿಂದಃ**

1. ಈ ದಿನ ನನ್ನ ಮುಖ್ಯ ವಿಚಾರಣೆಗಾಗಿ ನನ್ನ ಅಫಿಡವಿಟ್‌ನ್ನು ಸಲ್ಲಿಸಿದ್ದೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿದೆ. ಅದರಲ್ಲಿರುವ ವಿಷಯವನ್ನು ನಾನೇ ಹೇಳಿ ಬರೆಯಿಸಿ, ಸಹಿ ಮಾಡಿದ್ದೇನೆ. ಆ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆ ಎಂದು ಪರಿಗಣಿಸಬೇಕೆಂದು ಕೇಳುತ್ತೇನೆ.

2. ಶಾಲೆಯ ಮುಖ್ಯೋಪಾಧ್ಯಾಯರು ನಾನು ಕೊಟ್ಟ ಪತ್ರಕ್ಕೆ ಕೊಟ್ಟ ದಿನಾಂಕಃ 06-09-2021 ರ ಉತ್ತರ ಇದೇ ಇರುತ್ತದೆ-ಅದನ್ನು ನಿ.ಪಿ.1 ಎಂದು ಗುರುತಿಸಲಾಯಿತು. ತದ ನಂತರ ದಿನಾಂಕಃ 04-10-2021 ರಂದು 4 ನೇ ಎದುರುದಾರರ ಶಾಲೆಯಿಂದ ನನಗೆ ಕೊಟ್ಟ ಡಿಸ್ ಚಾರ್ಜ್ ಲೆಟರ್ ಇದೇ ಇರುತ್ತದೆ-ಅದನ್ನು ನಿ.ಪಿ.2 ಎಂದು ಗುರುತಿಸಲಾಯಿತು.

3. 2 ನೇ ಎದುರುದಾರರಿಗೆ ನಾನು ಮನವಿಯನ್ನು ಕೊಟ್ಟಾಗ ಅವರು ನನಗೆ ಕೊಟ್ಟ ದಿನಾಂಕಃ 22-10-2021 ರ ಜ್ಞಾಪನಾ ಪತ್ರ ಇದೇ ಇರುತ್ತದೆ-ಅದನ್ನು ನಿ.ಪಿ.3 ಎಂದು ಗುರುತಿಸಲಾಯಿತು. (ನಿ.ಪಿ.3 ರ ಜ್ಞಾಪನಾ ಪತ್ರದೊಂದಿಗೆ 3 ನೇ ಎದುರುದಾರರು ಕಳುಹಿಸಿದ್ದ ನಕಲನ್ನು ನನಗೆ ಕಳುಹಿಸಿರುತ್ತಾರೆ ಎಂದು ಸಾಕ್ಷಿದಾರರು ಹೇಳಿರುತ್ತಾರೆ, ಕಾರಣ ಅದನ್ನು ಗುರುತಿಸಲು ಅನುಮತಿ ನೀಡಿದೆ) ಅದು ಇದೇ ಇರುತ್ತದೆ-ಅದನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು.

4. ನಾನು 3 ನೇ ಎದುರುದಾರರಿಗೆ ಅರ್ಜಿ ಕೊಟ್ಟ ಮೇರೆಗೆ ವಿಚಾರಣೆಗಾಗಿ ಹಾಜರಾಗಬೇಕೆಂದು ನನಗೆ 3 ನೇ ಎದುರುದಾರರಿಂದ ಬಂದ ದಿನಾಂಕಃ 10-11-2021 ರ ಪತ್ರ ಇದೇ ಇರುತ್ತದೆ-ಅದನ್ನು ನಿ.ಪಿ.4 ಎಂದು ಗುರುತಿಸಲಾಯಿತು.

5. 3 ನೇ ಎದುರುದಾರರು 2 ನೇ ಎದುರುದಾರರಿಗೆ ಬರೆದಿರುವ ದಿನಾಂಕಃ 09-12-2021 ರ ಪತ್ರದ ನಕಲನ್ನು ನನಗೆ ಕಳುಹಿಸಿದ್ದು, ಅದು ಇದೇ ಇರುತ್ತದೆ-ಅದನ್ನು ನಿ.ಪಿ.5 ಎಂದು ಗುರುತಿಸಲಾಯಿತು.

6. 3 ನೇ ಎದುರುದಾರರು ನನಗೆ ಕಳುಹಿಸಿದ ದಿನಾಂಕಃ 27-09-2021 ರ ಪತ್ರ ಇದೇ ಇರುತ್ತದೆ-ಅದನ್ನು ನಿ.ಪಿ.6 ಎಂದು ಗುರುತಿಸಲಾಯಿತು. ಇದರೊಂದಿಗೆ 3 ನೇ ಎದುರುದಾರರು ಕಳುಹಿಸಿದ ಚೆಕ್ ಲಿಸ್ಟ್ ಇದೇ ಇರುತ್ತದೆ, ಅದನ್ನು ನಿ.ಪಿ. 7 ಎಂದು ಗುರುತಿಸಲಾಯಿತು.

7. ಜಿಲ್ಲಾಧಿಕಾರಿಯವರಿಗೆ ನಾನು ಕೊಟ್ಟಿರುವ ಮನವಿಯ ನಕಲು ಇದೇ ಇರುತ್ತದೆ, ಅದಕ್ಕೆ ಡಿ.ಸಿ. ಕಛೇರಿಯಿಂದ ಸೀಲ್ ಮತ್ತು ಸಹಿ ಹಾಕಿರುತ್ತಾರೆ -ಅದನ್ನು ನಿ.ಪಿ.8 ಎಂದು ಗುರುತಿಸಲಾಯಿತು.

8. ದಿನಾಂಕಃ 11-10-2021 ರಂದು 3 ನೇ ಎದುರುದಾರರಿಗೆ ಒಂದು ಮನವಿಯನ್ನು ಕಳುಹಿಸಿಕೊಟ್ಟಿದ್ದು, ಅದನ್ನು ಸ್ವೀಕರಿಸಿದ ಬಗ್ಗೆ ನನ್ನ ಬಳಿ ಇರುವ ನಕಲಿಗೆ ಆ ಕಛೇರಿಯಿಂದ ಸೀಲ್ ಹಾಕಿ ಸಹಿ ಮಾಡಿದ್ದು ಇದೇ ಇರುತ್ತದೆ, ಅದನ್ನು

ನಿ.ಪಿ. 9 ಎಂದು ಗುರುತಿಸಲಾಯಿತು.

9. 2 ನೇ ಎದುರುದಾರರಿಗೆ ಸಹಾ ಒಂದು ಮನವಿಯನ್ನು ಕಳುಹಿಸಿಕೊಟ್ಟಿದ್ದು, ಅದನ್ನು ಸ್ವೀಕರಿಸಿದ ಬಗ್ಗೆ ನನ್ನ ಬಳಿ ಇರುವ ನಕಲಿಗೆ ಆ ಕಛೇರಿಯಿಂದ ಸೀಲ್ ಹಾಕಿ ಸಹಿ ಮಾಡಿದ್ದು ಇದೇ ಇರುತ್ತದೆ, ಅದನ್ನು ನಿ.ಪಿ. 10 ಎಂದು ಗುರುತಿಸಲಾಯಿತು.

10. ದಿನಾಂಕಃ 03-12-2021 ರಂದು 2 ನೇ ಎದುರುದಾರರಿಗೆ ಒಂದು ಮನವಿಯನ್ನು ಕಳುಹಿಸಿಕೊಟ್ಟಿದ್ದು, ಅದನ್ನು ಸ್ವೀಕರಿಸಿದ ಬಗ್ಗೆ ನನ್ನ ಬಳಿ ಇರುವ ನಕಲಿಗೆ ಆ ಕಛೇರಿಯಿಂದ ಸೀಲ್ ಹಾಕಿ ಸಹಿ ಮಾಡಿದ್ದು ಇದೇ ಇರುತ್ತದೆ, ಅದನ್ನು ನಿ.ಪಿ. 11 ಎಂದು ಗುರುತಿಸಲಾಯಿತು.

11. ದಿನಾಂಕಃ 18-11-2021 ರಂದು 3 ನೇ ಎದುರುದಾರರಿಗೆ ಒಂದು ಮನವಿಯನ್ನು ಕಳುಹಿಸಿಕೊಟ್ಟಿದ್ದು, ಅದನ್ನು ಸ್ವೀಕರಿಸಿದ ಬಗ್ಗೆ ನನ್ನ ಬಳಿ ಇರುವ ನಕಲಿಗೆ ಆ ಕಛೇರಿಯಿಂದ ಸೀಲ್ ಹಾಕಿ ಸಹಿ ಮಾಡಿದ್ದು ಇದೇ ಇರುತ್ತದೆ, ಅದನ್ನು ನಿ.ಪಿ. 12 ಎಂದು ಗುರುತಿಸಲಾಯಿತು.

(ಈ ಸಮಯದಲ್ಲಿ ಮುಂದಿನ ಮುಖ್ಯ ವಿಚಾರಣೆಗೆ ಸಮಯ ಬೇಕೆಂದು, ಉಳಿದ ದಾಖಲೆಗಳು ಜೆರಾಕ್ಸ್ ನಕಲುಗಳು ಇರುತ್ತವೆ ಎಂದು ಸಮಯ ಕೇಳಿರುತ್ತಾರೆ, ಮುಂದಿನ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)
ಓ.ಹೇ.ಕೇ.ಸ.ಇ.ಎ.ಒ.

Sd/-31-07-2023
(ಶುಭ ಗೌಡರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿಃ-

Visit **ecourts.gov.in** for updates or download mobile app “**eCourts Services**” from Android or iOS